ಯೋಜನೆಯನ್ನು ರೂಪಿಸಿಕೊಳ್ಳಬೇಕು. ಹಣಕಾಸು ವರ್ಷದ ಆರಂಭದಲ್ಲೇ ಸೂಕ್ತ ಯೋಜನೆಗಳನ್ನು ರೂಪಿಸುವುದರಿಂದ ವರ್ಷದ ಕಡೇ ಕ್ಷಣದಲ್ಲಿನ ಕಸರತ್ತನ್ನುತಪ್ಪಿಸಬಹುದು. ನಿಮ್ಮ ವೇತನ ಹೆಚ್ಚಳ ಅಥವಾ ಬರುವ ಹೆಚ್ಚುವರಿ ಆದಾಯವನ್ನು ತುರ್ತು ನಿಧಿಯಾಗಿ ರೂಪಾಂತರಿಸಿದರೆ, ಭವಿಷ್ಯದ ದಿನಗಳಲ್ಲಿ ಎದುರಾಗುವ ಅಪಾಯಗಳ ತೀವ್ರತೆಯನ್ನು ತಗ್ಗಿಸಬಹುದು.

## ಬಲವಂತದ ಉಳಿತಾಯ v/s ಸ್ವಾತಂತ್ರ್ಯ

ತೆರಿಗೆ ಉಳಿಸುವ ಕಾರಣಕ್ಕಾಗಿಯಾದರೂ ಕೆಲವರು ಉಳಿತಾಯ ಯೋಜನೆಗಳನ್ನು ಆರಂಭಿಸಿರುತ್ತಾರೆ. ಆದರೆ, ಸರ್ಕಾರದ ಹೊಸ ತೆರಿಗೆ ಪಾವತಿ ಪದ್ಧತಿಯು ಉಳಿತಾಯವನ್ನು ನಿರುತ್ತೇಜನ ಮಾಡುವಂತಿದೆ. ಮಧ್ಯಮವರ್ಗದವರು ಇಷ್ಟು ವರ್ಷಗಳ ತನಕ ಕಾಯ್ದುಕೊಂಡು ಬಂದ ಉಳಿತಾಯದ ಶಿಸ್ತಿಗೆ ಭಂಗ ತರುವಂತೆ ಸರ್ಕಾರ ವರ್ತಿಸಿದೆ ಎನ್ನುವ ದೂರುಗಳೂ ಇವೆ. ಒಂದು ಸಲ ಉಳಿತಾಯದ ಶಿಸ್ತನ್ನು ವ್ಯಕ್ತಿಯು ಮೀರಿದರೆ, ಮತ್ತೆ ಹಳಿಗೆ ಮರಳುವುದು ಕಷ್ಟ. ಭಾರತದಂಥ ದೇಶದಲ್ಲಿ ಆರ್ಥಿಕ ಸಾಕ್ಷರತೆ ಬಹಳ ಕಡಿಮೆ.

### ಹೊಸ ತೆರಿಗೆ ಪಾವತಿ ಪದ್ಧತಿಯ ಸ್ಲಾಬ್‌ಗಳಲ್ಲಿ ಏನೇನು ಬದಲಾಗಿದೆ?

| ಈಗಿನ ಸ್ಲಾಬ್ (ಮಾರ್ಚ್ 31ರ ತನಕ) | | ಪರಿಷ್ಕೃತ ಸ್ಲಾಬ್ (ಏಪ್ರಿಲ್ 1ರಿಂದ) | |
|---|---|---|---|
| 2.5 ಲಕ್ಷ ರೂ. ತನಕ | 0% | 3 ಲಕ್ಷ ರೂ. ತನಕ | 0% |
| 2.5ರಿಂದ 5 ಲಕ್ಷ ರೂ.ತನಕ | 5% | 3ರಿಂದ 6 ಲಕ್ಷ ರೂ.ತನಕ | 5% |
| 5ರಿಂದ 7.5 ಲಕ್ಷ ರೂ.ತನಕ | 10% | 6ರಿಂದ 9 ಲಕ್ಷ ರೂ.ತನಕ | 10% |
| 7.5ರಿಂದ 10 ಲಕ್ಷ ರೂ.ತನಕ | 15% | 9ರಿಂದ 12 ಲಕ್ಷ ರೂ.ತನಕ | 15% |
| 10ರಿಂದ 12.5 ಲಕ್ಷ ರೂ.ತನಕ | 20% | 12ರಿಂದ 15 ಲಕ್ಷ ರೂ.ತನಕ | 20% |
| 12.5ರಿಂದ 15 ಲಕ್ಷ ರೂ.ತನಕ | 25% | 15 ಲಕ್ಷ ರೂ.ಗಿಂತ ಹೆಚ್ಚಿನದಕ್ಕೆ | 30% |
| 15 ಲಕ್ಷ ರೂ.ಗಿಂತ ಹೆಚ್ಚಿನದಕ್ಕೆ | 30% | 15 ಲಕ್ಷ ರೂ.ಗಿಂತ ಹೆಚ್ಚಿನದಕ್ಕೆ | 30% |

ನಿವೃತ್ತಿ ಯೋಜನೆಗಳ ಅರಿವೂ ನಮ್ಮಲ್ಲಿ ಅನೇಕರಿಗೆ ಇಲ್ಲ. ಹೆಚ್ಚು ಹಣ ಕೈಯಲ್ಲಿ ಉಳಿಯುವ ಹೊಸ ತೆರಿಗೆ ಪದ್ಧತಿಯು ಯುವ ಸಮುದಾಯಕ್ಕೆ ಆಕರ್ಷಕವಾಗಿ ಕಾಣಬಹುದು. ಸಾಂಪ್ರದಾಯಿಕ ಉಳಿತಾಯ ಯೋಜನೆಗಳನ್ನು ಬದಿಗೆ ಸರಿಸಿ, ಈ ತಲೆಮಾರಿನ ಹುಡುಗರು ಷೇರು, ಮ್ಯೂಚುವಲ್ ಫಂಡ್, ಕ್ರಿಪ್ಟೊ ಕರೆನ್ಸಿ ವ್ಯವಹಾರಗಳಲ್ಲಿ ಹಣ ತೊಡಗಿಸಬಹುದು. ಲಾಭವೂ ಬರಬಹುದು, ಮೂಲ ಅಸಲು ಕರಗಲೂಬಹುದು. ಇಂಥ ಹೊತ್ತಿನಲ್ಲಿ ಕಡ್ಡಾಯ ಉಳಿತಾಯಗಳು ಕೈ ಹಿಡಿಯುತ್ತವೆ ಎನ್ನುವುದು ತಜ್ಞರ ಸಲಹೆ.




ಆದಾಯ ತೆರಿಗೆ ಸೆಕ್ಷನ್ 80ಸಿ, 80ಸಿಸಿಸಿ, 80ಸಿಸಿಡಿ, 80ಡಿ ಪ್ರಕಾರ, ತೆರಿಗೆದಾರರು ಸಾಕಷ್ಟು ತೆರಿಗೆ ಉಳಿಸಬಹುದು. ಎಚ್‌ಆರ್‌ಎ, ಎಲ್‌ಟಿಎ, ಪಿಪಿಎಫ್, ಎನ್‌ಪಿಎಸ್, ಟರ್ಮ್ ಪ್ಲಾನ್ ಸೇರಿದಂತೆ ನಾನಾ ಉಳಿತಾಯ, ದೇಣಿಗೆ ಮತ್ತು ವೆಚ್ಚಗಳಿಗೆ ಆದಾಯ ತೆರಿಗೆ ವಿನಾಯಿತಿಯನ್ನು ಪಡೆಯಬಹುದು. ಹೋಮ್‌ಲೋನ್‌ನಲ್ಲಿ ಪಾವತಿಸುವ ಅಸಲು ಮತ್ತು 2 ಲಕ್ಷ ರೂ. ತನಕದ ಬಡ್ಡಿಯನ್ನು ತೋರಿಸಿ ಆದಾಯ ತೆರಿಗೆ ವಿನಾಯಿತಿ ಪಡೆಯಬಹುದು. ಇಬ್ಬರು ಮಕ್ಕಳ ಬೋಧನಾ ಶುಲ್ಕಗಳೂ ತೆರಿಗೆ ವಿನಾಯಿತಿ ವ್ಯಾಪ್ತಿಗೆ ಬರುತ್ತವೆ. ಒಟ್ಟಾರೆ, 2.5 ಲಕ್ಷ ರೂ.ಗಿಂತಲೂ ಅಧಿಕ ಮೊತ್ತದ ಡಿಡಕ್ಷನ್ ಮತ್ತು ತೆರಿಗೆ ವಿನಾಯಿತಿಗಳನ್ನು ನೀವು ಹೊಂದಿದ್ದರೆ, ಹಳೇ ತೆರಿಗೆ ಪಾವತಿ ಪದ್ಧತಿಯೇ ನಿಮಗೆ ಉತ್ತಮ.

ಆದಾಯ ತೆರಿಗೆಯ ಹೊಸತೋ ಹಳೆಯದೋ ಆವೃತ್ತಿಯನ್ನು ಆರಿಸಿಕೊಳ್ಳುವ ಮುನ್ನ, ತಜ್ಞರ ಸಲಹೆ ಪಡೆಯುವುದು ಉತ್ತಮ. ಅನುಕೂಲ ಹಾಗೂ ಮಿತಿ ಎರಡರಲ್ಲೂ ಇವೆ. ನಮ್ಮ ಆದಾಯಕ್ಕೆ ಯಾವುದು ಉತ್ತಮ ಎನ್ನುವುದನ್ನು ಆಯ್ದುಕೊಳ್ಳಲು ವಿವೇಚನೆ ಅಗತ್ಯ.

ಆದಾಯ ತೆರಿಗೆಗೆ ಸಂಬಂಧಿಸಿದಂತೆ ನಮ್ಮ ಆಯ್ಕೆ ಯಾವುದೇ ಇದ್ದರೂ ಮರೆಯಬಾರದ ಒಂದು ಸಂಗತಿಯಿದೆ. ಸಣ್ಣ ಉಳಿತಾಯಕ್ಕೆ ಸಂಬಂಧಿಸಿದ್ದದು. ನಾವು ಮಾಡುವ ಉಳಿತಾಯದಿಂದ ತೆರಿಗೆ ಉಳಿಯುತ್ತದೆ ಎನ್ನುವುದಾದರೆ ಅದು ಒಳ್ಳೆಯದೇ. ಹೊಸ ತೆರಿಗೆ ಪದ್ಧತಿಯನ್ನು ಆಯ್ದುಕೊಂಡರೆ, ಉಳಿತಾಯಕ್ಕೆ ತೆರಿಗೆ ರಿಯಾಯಿತಿ ದೊರೆಯುವುದಿಲ್ಲ. ಹಾಗೆಂದು ಉಳಿತಾಯ ಅಗತ್ಯವಿಲ್ಲ ಎಂದರ್ಥವಲ್ಲ. ತೆರಿಗೆ ಉಳಿಯಲಿ, ಬಿಡಲಿ – ಉಳಿತಾಯ ಯೋಜನೆಗಳನ್ನು ಮುಂದುವರಿಸುವುದು ಅಗತ್ಯ. ಜಾಗತಿಕ ಸಂದರ್ಭದಲ್ಲಿ ಹಣಕಾಸಿನ ಪರಿಸ್ಥಿತಿ ಒಂದೇ ರೀತಿ ಇರುವುದಿಲ್ಲ. ಹಾಗಾಗಿ, ನಾಳೆಗಳಿಗೆಂದು ಇಂದು ಉಳಿತಾಯ ಮಾಡುವುದು ಅಗತ್ಯ. ಗಳಿಕೆಯನ್ನೆಲ್ಲ ಖರ್ಚು ಮಾಡಿದರೆ, ಸಂಧ್ಯಾಕಾಲದಲ್ಲಿ ಪರಿತಪಿಸಬೇಕಾದೀತು.

ಪ್ರತಿಕ್ರಿಯಿಸಿ: feedback@sudha.co.in